







**(6ನೇ ಪುಟದಿಂದ)**

ಚಿತ್ರಗಳ ಸೂತ್ರಧಾರರು, ಅವರಿಂದ ಸ್ಫೂರ್ತಿಪಡೆದು ಚಿತ್ರಗಳನ್ನು ಬಿಡಿಸುತ್ತೇನೆ ಎಂದರು. ಖಯ್ಯಾಂನ ಅರ್ಥಮಾಡಿಕೊಂಡವರಿಗೆ ತನ್ನ ಚಿತ್ರಗಳು ಹೆಚ್ಚು ಅರ್ಥವಾಗುತ್ತವೆ ಎನ್ನುತ್ತಾರೆ ದಲೇರ್.

ದಲೇರ್ ಮಿಖ್ಯೊದ್ಲೋವ್ ಹುಟ್ಟಿದ್ದು ತಜಕಿಸ್ತಾನದ ದಕ್ಷಿಣ ಭಾಗ ಖಲಟಾನ್ ಪ್ರದೇಶದಲ್ಲಿ. 1976ರಲ್ಲಿ ಹುಟ್ಟಿದ ಅವರಿಗೆ ಚಿಕ್ಕಂದಿನಿಂದ ಚಿತ್ರಕಾರನಾಗುವ ಗುರಿಯೇನೂ ಇರಲಿಲ್ಲ. ಮಿಲಿಟರಿಗೆ ಸೇರಬೇಕೆಂಬ ಆಸೆಯಿತ್ತು. ಆದರೆ ಇವರಲ್ಲಿರುವ ಕಲಾವಿದನನ್ನು ಅಧ್ಯಾಪಕರುಗಳು ಚಿಕ್ಕಂದಿನಲ್ಲೇ ಗುರುತಿಸಿದರು ಹಾಗೂ ಕಲಾ ಕಾಲೇಜಿಗೆ ಸೇರಲು ದಾರಿಹೇಳಿಕೊಟ್ಟರು. ಹೈಸ್ಕೂಲು ಶಿಕ್ಷಣ ಪೂರೈಸಿದ ಮೇಲೆ, ದುಶಾಂಬೆಗೆ ಬಂದು ಕಲಾ ಕಾಲೇಜಿಗೆ ಸೇರಿಕೊಂಡರು. ನಂತರ ಸರ್ಕಾರಿ ಲಲಿತಕಲಾ ಕಾಲೇಜಿನಲ್ಲಿ ಪದವಿ ಮುಗಿಸಿ ತಾನು ಕಲಿತ ಕಾಲೇಜಿನಲ್ಲಿಯೇ ಅಧ್ಯಾಪಕರಾದರು.

ದುಶಾಂಬೆಯಲ್ಲಿ ಅವರ ಸ್ಟುಡಿಯೋ ಇದೆ. ಅದರೊಳಗೆ ಸೇರಿಕೊಂಡರೆಂದರೆ ದಲೇರ್‌ಗೆ ಹೊರಗಿನ ಪ್ರಪಂಚದ ಅರಿವೇ ಇರುವುದಿಲ್ಲ. ಆ ಬಗ್ಗೆ ಅವರಿಗೆ ಆಸಕ್ತಿಯೂ ಇಲ್ಲ. ತಾನಾಯ್ತು, ತನ್ನ ಬಣ್ಣಗಳಾಯ್ತು ಎಂಬ ಬದುಕು ಅವರದು. ಈಗಾಗಲೇ ತಜಕಿಸ್ತಾನ, ಉಜ್ಬೆಕಿಸ್ತಾನ, ಚೀನಾ, ಕಿರ್ಗಿಸ್ತಾನ, ರಷ್ಯಾಗಳಲ್ಲಿ ದಲೇರ್ ಅವರ ಚಿತ್ರಗಳ ಪ್ರದರ್ಶನ ನಡೆದು ಒಳ್ಳೆಯ ಹೆಸರುಬಂದಿದೆ. ಅವರ ರಚನೆಯ ಚಿತ್ರಗಳು ಅಮೆರಿಕ, ಜರ್ಮನಿ, ಟರ್ಕಿ, ರಷ್ಯಾ, ಇರಾನ್ ಹಾಗೂ ಏಷಿಯಾದ ಅನೇಕ ದೇಶಗಳ ಗ್ಯಾಲರಿಗಳಲ್ಲಿ ಪ್ರದರ್ಶನಗೊಂಡಿವೆ.

ಹೂಜಿಗಳ ಮೇಲೆ ಇವರಿಗೆ ಅಕಾರಣ ಪ್ರೀತಿ. ಅದ್ಯಾಕೋ ಗೊತ್ತಿಲ್ಲ, ಚಿಕ್ಕಂದಿನಿಂದ ಅವರಿಗೆ ಹೂಗಳನ್ನಿಡುವ ಕುಂಡಗಳೆಂದರೆ ಪ್ರೀತಿ, ಕುತೂಹಲ. ಮುನ್ನೂರಕ್ಕೂ ಹೆಚ್ಚು ಮಾದರಿಯ ಹೂಜಿಗಳನ್ನು ಅವರು ಸಂಗ್ರಹಿಸಿದ್ದಾರೆ. 'ಹೂಜಿಗಳು ಹೇಳುವುದೇನು' ಹಾಗೂ 'ಹೂಜಿಗಳ ಗುಟ್ಟುಗಳು' ಎಂಬ ಪ್ರದರ್ಶನಗಳನ್ನೂ ಅವರು ಮಾಡಿದ್ದಾರೆ. ಎಲ್ಲಿಯೇ ಒಳ್ಳೆಯ ಹೂಜಿ ಕಾಣಲಿ ಅದನ್ನು ಪಡೆಯುವುದು ಅವರ ಆಸೆ. ಜೊತೆಗೆ ಅದರ ಚಿತ್ರ ಬಿಡಿಸುವ ಅದಮ್ಯ ಉತ್ಸಾಹ.

ಅವರ ರೆಡ್‌ಲೈನ್ ಪ್ರದರ್ಶನದಲ್ಲಿ ಎದ್ದು ಕಾಣಿಸಿದ್ದು ನೈಜ ಮತ್ತು ಭ್ರಾಮಕ ವಿಭಾಗಗಳೆರಡರಲ್ಲೂ ಅವರ ಅಪ್ಪಟ ಪ್ರತಿಭೆ. ಅವರಿಗೆ ಭಾರತದ ಸಂಗೀತದ ಮೇಲೆ ಬಹಳ ಪ್ರೀತಿ. ಬಾಲಿವುಡ್ ಹಾಡುಗಳಿಂದ ಬಹಳ ಪ್ರೇರೇಪಿತರಾಗಿರುವ ದಲೇರ್, ಚಿತ್ರಬಿಡಿಸುವಾಗ ಬಾಲಿವುಡ್ ಚಿತ್ರಗೀತೆಗಳನ್ನು ಹಿನ್ನೆಲೆಯಲ್ಲಿ ಕೇಳುವ ಅಭ್ಯಾಸ ಹೊಂದಿದ್ದಾರಂತೆ. 'ನನ್ನಲ್ಲಿರುವ ಕಲಾವಿದನನ್ನು ಅನೇಕವೇಳೆ ಹೊರತುರುವುದೇ ಈ ಗೀತೆಗಳು' ಎನ್ನುತ್ತಾರೆ– ದಲೇರ್.

ಅವರ 'ರೆಡ್‌ಲೈನ್' ಪ್ರದರ್ಶನದಲ್ಲಿ ನೈಜಚಿತ್ರಗಳೂ ಅಮೂರ್ತ ಮಾದರಿಯ ಚಿತ್ರಗಳೂ ಇದ್ದವು. ಎಲ್ಲ ಚಿತ್ರಗಳಲ್ಲಿ ತಜಕಿಸ್ತಾನದ ಎಲೆಗಳ ಬಣ್ಣಗಳು ಇಣುಕುತ್ತಿದ್ದವು. ಹೆಚ್ಚಿನವು ಕೆಂಪು ಬಣ್ಣದ ಓಕುಳಿ ಆಡಿದಂತೆ ಕಂಡವು.